**ಸಿ.ಸಿ ಸಂಖ್ಯೆ 417/2025**

**ಚಾಸಾಃ 30 ಫ್ರಾಸಾಃ 11**

**ದಿನಾಂಕ 23.07.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಿಪಿ–15ರ ಮಹಜರಿನಡಿ ತನಿಖಾಧಿಕಾರಿಗಳು ಎ.ಜಿ.ಎಸ್ ವಿಶಾಲ್ ಎಂಟರ್ ಪ್ರೈಸಸ್ ನವರು ನೀಡಿದ ರಶೀದಿ, ರಕ್ತ ಮಿಶ್ರಿತ ಕಾರಿನ ಗಾಜಿನ ಚೂರುಗಳು,

ಮಾದರಿಗಾಜಿನ ಚೂರುಗಳನ್ನು ವಶಪಡಿಸಿಕೊಂಡಿದ್ದಾರೆ. ಕಾರಿನ ಮುಂಭಾಗದಲ್ಲಿ S ಎನ್ನುವ ಲೋಗೋ ಇರಲಿಲ್ಲ. ಕಾರಿನ ಮುಂಭಾಗದ ಎಡಭಾಗದಲ್ಲಿ ರಕ್ತದ ಕಲೆ ಇರುವುದು ಕಂಡು ಬಂದಿರುತ್ತದೆ. ಆ ರಕ್ತದ ಕಲೆಯನ್ನು ಸ್ವಾಬ್ ಮೂಲಕ ಶೇಖರಿಸಿಕೊಂಡು ತನಿಖಾಧಿಕಾರಿ ವಶಪಡಿಸಿಕೊಂಡಿದ್ದಾರೆ. ಅವುಗಳನ್ನು ನಾನು ನೋಡಿ ಗುರುತಿಸುತ್ತೇನೆ. ಎ.ಜಿ.ಎಸ್ ವಿಶಾಲ್ ಎಂಟರ್ ಪ್ರೈಸಸ್ ನವರು ನೀಡಿದ ರಶೀದಿಯನ್ನು ನಾನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–17 ಎಂದು ಗುರುತಿಸಲಾಗಿದೆ. ರಕ್ತ ಮಿಶ್ರಿತ ಕಾರಿನ ಗಾಜಿನ ಚೂರುಗಳನ್ನು ನಾನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಎಂ.ಒ.6 ಎಂದು ಗುರುತಿಸಲಾಗಿದ್ದು, ಮಾದರಿ ಗಾಜಿನ ಚೂರುಗಳನ್ನು ಈಗಾಗಲೇ ಎಂ.ಒ. 5 ಎಂದು ಗುರುತಿಸಲಾಗಿದೆ. ಸ್ವಾಬ್ ಮೂಲಕ ಶೇಖರಿಸಿದ ರಕ್ತದ ಕಲೆಗಳನ್ನು ಈಗಾಗಲೇ ಎಂ.ಒ.7 ಮತ್ತು 8 ಎಂದು ಗುರುತಿಸಲಾಗಿದೆ.

ನಿಪಿ–15 ರ ಮಹಜರ್ ಜರುಗಿಸುವಾಗ ನಾನು ಪೋಟೋ ತೆಗೆದು, ವೀಡಿಯೋ ಮಾಡಿದ್ದು, ಅದನ್ನು ಸಿ.ಡಿ ಗೆ ಕಾಪಿ ಮಾಡಿ ಕೊಟ್ಟಿದ್ದೇನೆ. ಆ ಪೋಟೋಗಳನ್ನು ಈಗಾಗಲೇ ನಿಪಿ–4 ರಿಂದ 8 ಎಂದು ಹಾಗೂ ಸಿ.ಡಿಯನ್ನು ಈಗಾಗಲೇ ನಿಪಿ–9 ಎಂದು ಗುರುತಿಸಲಾಗಿದೆ. ಕಾರನ್ನು ವಶಪಡಿಸಿಕೊಳ್ಳುವಾಗ ತೆಗೆದ ಪೋಟೋ ನಿಪಿ–10 ಮತ್ತು 11ರ ಪೋಟೋ ಆಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ**

ಮಹಜರ್ ಜರುಗಿಸುವಾಗ ನಾನು ಸ್ಥಳದಲ್ಲಿ ಹಾಜರಿದ್ದೆ ಎನ್ನುವುದು ಪೋಟೋದಲ್ಲಾಗಲೀ, ವೀಡಿಯೋದಲ್ಲಾಗಲೀ ಕಂಡು ಬರುವುದಿಲ್ಲ. ಸಂಪೂರ್ಣ ಮಹಜರ್ ಪ್ರಕ್ರಿಯೆಯನ್ನು ನಾನು ವೀಡಿಯೋ ಮಾಡಿದ್ದೇನೆ. ಗಾಜಿನ ಚೂರುಗಳು, ರಕ್ತದ ಕಲೆಗಳು, ಗಾಜಿನ ಚೂರುಗಳು ಇದ್ದ ಸ್ಥಳದ ವೀಡಿಯೋವನ್ನು ನಾನು ಮಾಡಿದ್ದೇನೆ. ನಿಪಿ–2 ರ ಮಹಜರನ್ನು ಪ್ರಾಸಾ–10 ರವರು ಲ್ಯಾಪ್ ಟಾಪ್ ನಲ್ಲಿ ಟೈಪ್

ಮಾಡಿದ್ದಾರೆ. ಫ್ರಾಸಾ–10 ರವರು ಮಹಜರ್ ಟೈಪ್ ಮಾಡಿರುವುದು ವೀಡಿಯೋದಲ್ಲಿ ಕಂಡು ಬರುತ್ತದೆ. ವೀಡಿಯೋದಲ್ಲಿ ಮಹಜರ್ ಟೈಪ್ ಮಾಡುವುದು ಹಾಗೂ ಪ್ರಿಂಟ್ ತೆಗೆದಿರುವುದು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–2 ಮಹಜರಿಗೆ ನಾನು ಸ್ಥಳದಲ್ಲಿ ಸಹಿ ಮಾಡಿದ್ದೇನೆ. ಅದರಲ್ಲಿ ಬರೆದ ವಿಚಾರಗಳನ್ನು ನಾನು ತಿಳಿದು ಕೊಂಡಿದ್ದೇನೆ.

ಘಟನೆ ನಡೆದಿದೆ ಎಂದು ಹೇಳುವ ಸ್ಥಳದಲ್ಲಿ ರಸ್ತೆಯ ಉತ್ತರ ಬದಿಯಲ್ಲಿ ಅಂದರೆ ಡಾಂಬಾರು ರಸ್ತೆಯಿಂದ 3 ಅಡಿ ಅಂತರದೊಳಗೆ ಕಬ್ಬಿಣದ ಒಂದು ಸೂಚನಾ ಫಲಕ ಇದೆ ಎಂದರೆ ಸರಿ. ಅದು ನಿಪಿ–4 ರ ಫೋಟೋದಲ್ಲಿ ಕಂಡು ಬರುತ್ತದೆ ಎಂದರೆ ಸರಿ. ಆ ಸೂಚನಾ ಫಲಕದಿಂದ ಎಷ್ಟು ಅಡಿ ಅಂತರದಲ್ಲಿ ಸುಳ್ಯದ ಕಡೆಗೆ ಅಥವಾ ಪುತ್ತೂರು ಕಡೆಗೆ ಘಟನಾ ಸ್ಥಳ ಇದೆ ಎಂದು ಫ್ರಾಸಾ–1 ರವರು ತೋರಿಸಿಕೊಟ್ಟಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸುಳ್ಯದ ಕಡೆಗೆ 10 ಅಡಿಯ ಒಳಗೆ ಇದೆ ಎಂದು ಉತ್ತರಿಸುತ್ತಾರೆ. ಘಟನಾ ಸ್ಥಳದ ಹತ್ತಿರ ಸೂಚನಾ ಫಲಕ ಇರುವ ಬಗ್ಗೆ ನಿಪಿ–2 ರ ಮಹಜರಿನಲ್ಲಿ ಬರೆದಿದ್ದಾರೋ ಇಲ್ಲವೋ ನನಗೆ ನೆನಪಿಲ್ಲ.

ಕಾರಿನ ಮುಂಭಾಗದ ಎಡಭಾಗದಲ್ಲಿ ರಕ್ತದ ಕಲೆ ಇತ್ತು ಎಂದು ತೋರಿಸುವ ಫೋಟೋಗಳನ್ನು ನಾನು ತೆಗೆದಿದ್ದೇನೆ. ಅದರಂತೆ ಆ ರಕ್ತದ ಕಲೆಗಳನ್ನು ಶೇಖರಿಸಿರುವುದು ವೀಡಿಯೋದಲ್ಲಿ ಕಂಡು ಬರುತ್ತದೆ. ನಾನು ಆ ದಿನ ಫೋಟೋ ತೆಗೆದು ವೀಡಿಯೋ ಮಾಡಿದ್ದೇನೆ ಎಂದು ಹೇಳಲು ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳು ಸೃಷ್ಟಿಸಿದ ದಾಖಲೆಗೆ ನಾನು ಸಹಿ ಮಾಡಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದೃಢೀಕರಣ ಪತ್ರವನ್ನು ಸೃಷ್ಟಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಕಾರನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳುವ ಸ್ಥಳಕ್ಕೆ ನಾನು ಹೋಗಿಲ್ಲ, ಅಲ್ಲಿ ಫೋಟೋ ತೆಗೆದಿಲ್ಲ, ವೀಡಿಯೋ ಮಾಡಿಲ್ಲ ಎಂದರೆ ಸರಿಯಲ್ಲ. ಅಲ್ಲಿ ನಾನು ಫೋಟೋ ತೆಗೆದು ವೀಡಿಯೋ ಮಾಡಿದ್ದೇನೆ ಎಂದು

ಸುಳ್ಳು ದೃಢೀಕರಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳು ಸಲ್ಲಿಸಿದ ಸುಳ್ಳು ದೋಷಾರೋಪಣ ಪಟ್ಟಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಜವಾದ ಘಟನಾ ಸ್ಥಳದಲ್ಲಿ ತನಿಖಾಧಿಕಾರಿ ಯಾವುದೇ ಮಹಜರ್ ಮಾಡಿಲ್ಲ, ಪೋಟೋ ತೆಗೆಸಿಲ್ಲ, ವೀಡಿಯೋ ಮಾಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ